# ಖುಷಿ ಖುಷಿಯಲಿ...

■ ಪದ್ಮನಾಭ ಭಟ್



ಇತ್ತೀಚೆಗೆ ಬಿಡುಗಡೆಯಾದ ಕನ್ನಡ ಸಿನಿಮಾಗಳಲ್ಲಿ ಗಮನಸೆಳೆದ ಸಿನಿಮಾ 'ದಿಯಾ'. ಚಿತ್ರದ ಕಥೆಯಷ್ಟೇ ನಾಯಕಿ ಖುಷಿ ಅವರ ನಟನೆಯೂ ಪ್ರಶಂಸೆಗೆ ಒಳಗಾಗಿದೆ. ಇದರಿಂದ ಖುಷಿ ನಿಜಕ್ಕೂ ತುಂಬ ಖುಷಿಯಾಗಿದ್ದಾರೆ. ಹಾಗೆಯೇ ಈ ಪ್ರಶಂಸೆ ತನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂಬ ಅರಿವೂ ಅವರಿಗೆ ಇದೆ.

ಖುಷಿ ಕುಟುಂಬದವರು ಮದ್ದೂರು ಮೂಲದವರು. ಹುಟ್ಟಿದ್ದು ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿಯೇ. ಸಂಗೀತದ ಬಗ್ಗೆ ಒಲವಿದ್ದ ಖುಷಿ ಭರತನಾಟ್ಯ ಕಲಾವಿದೆಯೂ ಹೌದು. ಸಂಗೀತ ಕಲಿಸುತ್ತಿದ್ದ ಗುರುಗಳ ಮಗನೇ ಒಂದು ನಾಟಕ ತಂಡ ಕಟ್ಟಿದಾಗ ಖುಷಿಗೆ ಅದರಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ಅಲ್ಲಿಂದ ಅವರ ಆಸಕ್ತಿ ರಂಗಭೂಮಿಗೂ ವಿಸ್ತರಿಸಿಕೊಂಡಿತು. ತ್ರಿನೇತ್ರ, ಸರ್ವಸ್ವ, ಸ್ಪಂದನ ಹೀಗೆ ಹಲವು ರಂಗತಂಡಗಳಲ್ಲಿ ಕೆಲಸ ಮಾಡಿದ ಅನುಭವ ಖುಷಿ ಅವರಿಗಿದೆ. ರಂಗಭೂಮಿ ನಟನೆಯಲ್ಲಿಯೇ ತೃಪ್ತಿಯನ್ನು ಕಂಡುಕೊಂಡಿದ್ದ ಅವರನ್ನು ಸಿನಿಮಾದೆಡೆಗೆ ನಡೆಯಲು ಪ್ರೋತ್ಸಾಹ ಕೊಟ್ಟವರು ಮಂಡ್ಯ ರಮೇಶ್.

''ಮಂಡ್ಯ ರಮೇಶ್ ಅವರು, ರಂಗಭೂಮಿಯಲ್ಲಿ ನನ್ನ ನಟನೆ ನೋಡಿ, ನೀನು ಸಿನಿಮಾ– ಧಾರಾವಾಹಿಗಳಲ್ಲಿ ನಟಿಸು. ಒಳ್ಳೆಯ ಭವಿಷ್ಯವಿದೆ ಎಂದು ಹೇಳಿ ಪ್ರೋತ್ಸಾಹಿಸಿದರು. ಅಲ್ಲಿಯವರೆಗೆ ನನಗೆ ಆ ಕಡೆ ಗಮನವೇ ಇರಲಿಲ್ಲ. ನಂತರ ಟಿ.ಎನ್. ಸೀತಾರಾಮ್ ಅವರ ಮಗ ಸತ್ಯಜಿತ್ ನಿರ್ದೇಶಿಸಿದ 'ಹಿಂಗ್ಯಾಕೆ' ಸಿನಿಮಾದಲ್ಲಿ ಚಿಕ್ಕ ಪಾತ್ರ ಮಾಡುವ ಅವಕಾಶ ಸಿಕ್ತು. ನಂತರ 'ದ ಗ್ರೇಟ್ ಸ್ಟೋರಿ ಆಫ್ ಸೋಡಾಬುಡ್ಡಿ' ಚಿತ್ರದಲ್ಲಿ ನಟಿಸಿದೆ'' ಎಂದು ರಂಗಭೂಮಿಯಿಂದ ಚಿತ್ರರಂಗಕ್ಕೆ ಪ್ರವೇಶಿಸಿದ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ ಖುಷಿ.

ಎರಡು ಚಿತ್ರಗಳ ನಂತರ ಸಿಕ್ಕ ಅವಕಾಶ 'ದಿಯಾ'. 'ಈ ಹಿಂದೆ ಎರಡು ಸಿನಿಮಾಗಳಲ್ಲಿ ನಟಿಸಿದ್ದರೂ 'ದಿಯಾ' ನನ್ನ ಮೊದಲ ಸಿನಿಮಾ ಥರವೇ' ಎಂದು ಒತ್ತಿ ಹೇಳುತ್ತಾರೆ ಖುಷಿ. ಇದಕ್ಕೆ ಕಾರಣವೂ ಇದೆ. ಆಗಿನ್ನೂ ಅಂಬೆಗಾಲಿಡುತ್ತಿದ್ದ ಹುಡುಗಿಗೆ ಇಷ್ಟು ಒಳ್ಳೆಯ ಅವಕಾಶ ಸಿಕ್ಕಿದ್ದು ಮತ್ತು ಅದಕ್ಕೆ ಅಷ್ಟೇ ಅತ್ಯುತ್ತಮ ಪ್ರತಿಸ್ಪಂದನ ದೊರಕಿದ್ದು ಅವರ ಖುಷಿಗೆ ಕಾರಣ. ಇದಕ್ಕೆ ಕಾರಣರಾದ ನಿರ್ದೇಶಕ ಅಶೋಕ್ ಅವರನ್ನು ವಿಶೇಷವಾಗಿ ಅವರು ಸ್ಮರಿಸುತ್ತಾರೆ.

'ಅಶೋಕ್ ಅವರು ಅದುವರೆಗೆ ನನಗಿದ್ದ ನಟನೆಯ ವ್ಯಾಖ್ಯಾನವನ್ನು ಪೂರ್ತಿಯಾಗಿ ಒಡೆದುಹಾಕಿಬಿಟ್ಟರು. ತುಂಬ ಸಹಜವಾಗಿ ಅಭಿನಯಿಸುವುದನ್ನು ಹೇಳಿಕೊಟ್ಟರು' ಎಂದು ನೆನಪಿಸಿಕೊಳ್ಳುತ್ತಾರೆ.

'ದಿಯಾ' ಚಿತ್ರ ತೆರೆಗೆ ಬರುವವರೆಗೆ ಬೇರೆ ಯಾವ ಪಾತ್ರಗಳನ್ನೂ ಒಪ್ಪಿಕೊಳ್ಳುವುದಿಲ್ಲ ಎಂದು ನಿರ್ಧರಿಸಿದ್ದ ಅವರು ಹಲವು ಅವಕಾಶಗಳಿಗೆ ಬೆನ್ನು ಮಾಡಿದ್ದರು. ಕಾರಣ ಇಷ್ಟೆ, ಆ ಚಿತ್ರಕ್ಕೆ ಸಿಗುವ ಪ್ರತಿಸ್ಪಂದನ ನೋಡಿ ಮುಂದೆ ಅಡಿ ಇಡಬೇಕು ಎಂಬ ಆಲೋಚನೆ.

'ವೃತ್ತಿಬದುಕಿನ ಆರಂಭದಲ್ಲಿಯೇ ಇಂಥ ಸಿನಿಮಾ ಮತ್ತು ಪಾತ್ರ ಸಿಕ್ಕಿದ್ದು ನನ್ನ ಅದೃಷ್ಟ. ನನ್ನ ಪ್ರತಿಭೆಯನ್ನು ಆ ಪಾತ್ರದ ಮೂಲಕ ಸಾಬೀತುಗೊಳಿಸಿದ್ದೇನೆ. ಜನರು ಪಾತ್ರವನ್ನು ಮೆಚ್ಚಿಕೊಂಡಿದ್ದಾರೆ. ಹೀಗೆ ಒಂದು ಚಿತ್ರದ ಬಗ್ಗೆ ಪ್ರಶಂಸೆ ಸಿಕ್ಕಿದಾಗ ನಮ್ಮ ಜವಾಬ್ದಾರಿಯೂ ಹೆಚ್ಚುತ್ತದೆ. ಈ ಜವಾಬ್ದಾರಿಯನ್ನು ಅರಿತೇ ಮುಂದೆ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುತ್ತೇನೆ' ಎನ್ನುವ ಅವರು ಚ್ಯೂಸಿಯಾಗುವ ಸೂಚನೆಯನ್ನು ನೀಡುತ್ತಾರೆ. ಹಾಗೆಂದು ಇಂಥದ್ದೇ ಪಾತ್ರಗಳಲ್ಲಿ ನಟಿಸಬೇಕು ಎಂಬ ಚೌಕಟ್ಟೇನೂ ಅವರು ಹಾಕಿಕೊಂಡಿಲ್ಲ. 'ದಿಯಾ ಚಿತ್ರದಲ್ಲಿ ಅಂತರ್ಮುಖಿಯಾಗಿ ಕಾಣಿಸಿಕೊಂಡಿದ್ದೇನೆ. ಮುಂದಿನ ಅವಕಾಶ ಅದಕ್ಕೆ ವಿರುದ್ಧ ರೀತಿಯ ಪಾತ್ರ ಸಿಕ್ಕರೆ ಖುಷಿಯಿಂದಲೇ ಒಪ್ಪಿಕೊಳ್ಳುತ್ತೇನೆ. ಯಾವ ರೀತಿಯ ಪಾತ್ರ ಆದರೂ ಸೈ, ಆದರೆ ಕಥೆ ಮತ್ತು ನನ್ನ ಪಾತ್ರಕ್ಕೆ ಸಾಕಷ್ಟು ಮಹತ್ವ ಇರಬೇಕು' ಎನ್ನುವುದು ಅವರ ಖಚಿತ ಧೋರಣೆ.

'ಮುಂದಿನ ಸಿನಿಮಾ ಯಾವುದು?' ಎಂಬ ಪ್ರಶ್ನೆಗೆ ಅವರು, 'ಅದು ಒಳ್ಳೆಯ ಸ್ಕ್ರಿಪ್ಟ್, ಒಳ್ಳೆಯ ನಿರ್ದೇಶಕರು ಯಾವಾಗ ಸಿಗುತ್ತಾರೆ ಎಂಬುದರ ಮೇಲೆ ಅವಲಂಬಿತ ಆಗಿದೆ' ಎಂದು ನಗುತ್ತಲೇ ಉತ್ತರಿಸುತ್ತಾರೆ. ಆ ಉತ್ತರದಲ್ಲಿಯೇ ಚಿತ್ರರಂಗದಲ್ಲಿ ಗಟ್ಟಿ ಹೆಜ್ಜೆ ಊರುವ ಲಕ್ಷಣಗಳೂ ಎದ್ದು ಕಾಣುತ್ತವೆ. ■